# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ:ವಿ.ಆ(ಆ&ಘ.ತ್ಯಾ.ನಿ)/ಪಿ.ಆರ್/ 14 /16-17 ದಿನಾಂಕ: 18.04.2016

**ಕಛೇರಿ ಆದೇಶ**

ವಿಷಯ: ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ EC, Consent, authorization for MSW activities ಮುಂತಾದ ಶಾಸನಬದ್ಧ ಅನುಮತಿಗಳನ್ನು ಪಡೆಯಲು ಸಂಬಂಧಪಟ್ಟ ವಲಯ ವತಿಯಿಂದ ಕ್ರಮ ವಹಿಸುವ ಬಗ್ಗೆ .

ಉಲ್ಲೇಖ: ದಿನಾಂಕ 16-04-2016ರಂದು ಪರಿಸರ ಭವನ ಸಭಾಂಗಣದಲ್ಲ ಬಿಬಿಎಂಪಿ ವತಿಯಿಂದ ನಿರ್ವಹಿಸುತ್ತಿರುವ ಘನತ್ಯಾಜ್ಯ ಸಂಸ್ಕರಣಾ ಘಟಕಗಳ ನಿರ್ವಹಣೆ ಹಾಗೂ ವಿಲೇವಾರಿ ಕುರಿತು ನಡೆದ ಸಭೆಯಂತೆ.

******

ದಿನಾಂಕ 16-04-2016ರಂದು ಪರಿಸರ ಭವನ ಸಭಾಂಗಣದಲ್ಲಿ ಮಾನ್ಯ ಅಧ್ಯಕ್ಷರು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ರವರ ಅಧ್ಯಕ್ಷತೆಯಲ್ಲಿ ಬಿಬಿಎಂಪಿ ವತಿಯಿಂದ ನಿರ್ವಹಿಸುತ್ತಿರುವ ಘನತ್ಯಾಜ್ಯ ಸಂಸ್ಕರಣಾ ಘಟಕಗಳ ನಿರ್ವಹಣೆ ಹಾಗೂ ವಿಲೇವಾರಿ, ಬಯೋಮಿಥೆನೈಜೆಶನ್ ಘಟಕಗಳ ಕಾರ್ಯನಿರ್ವಹಣೆಗೆ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ Environment Clearance consent under water and air act, authorization for MSW activities ಮುಂತಾದ ಶಾಸನಬದ್ಧ ಅನುಮತಿಯನ್ನು ಪಡೆಯಬೇಕಾಗಿರುತ್ತದೆ.

1. ಕನ್ನಹಳ್ಳಿ, ಸೀಗೆಹಳ್ಳಿ, ದೊಡ್ಡಬಿದರಕಲ್ಲು, ಲಿಂಗಧೀರನಹಳ್ಳಿ, ಸುಬ್ಬರಾಯನಪಾಳ್ಯ, ಚಿಕ್ಕನಾಗಮಂಗಲ, ಘಟಕಗಳಿಗೆ consent under water and air act and authorization ಪಡೆಯುವುದು.
2. ಕೆಸಿಡಿಸಿ. ಮಾವಳ್ಳಿಪುರ, ಎಂ.ಎಸ್.ಜಿ.ಪಿ. ಘಟಕಗಳಿಗೆ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ consent and authorization ಪಡೆಯುವುದು
3. ಮಂಡೂರು ಘಟಕದ ತ್ಯಾಜ್ಯವನ್ನು ಬಯೋ ರೆಮಿಡಿಯೇಶನ್ ತಂತ್ರಜ್ಞಾನದಲ್ಲಿ ಸಂಸ್ಕರಿಸಲು ಕರೆದಿರುವ ಟೆಂಡರ್ ಡಿ.ಪಿ.ಆರ್. ಅನ್ನು ಮಂಡಳಿಗೆ ಸಲ್ಲಿಸಿ ಸಭೆಯಲ್ಲಿ ಚರ್ಚಿಸಿದಂತೆ ಅನುಮತಿ ಪಡೆಯಲು ಮಹದೇವಪುರ ವಲಯ ವತಿಯಿಂದ ಕ್ರಮ ಕೈಗೊಳ್ಳುವುದು.
4. ಟೆರಾಫಾರ್ಮ ಘಟಕದಲ್ಲಿ ಸಂಸ್ಕರಣಾಗೊಳ್ಳದೆ ಉಳಿದಿರುವ ತ್ಯಾಜ್ಯ ವಿಲೇವಾರಿಯ ಕುರಿತು ತೆಗೆದುಕೊಳ್ಳಬೇಕಾದಂತಹ ಕ್ರಮದ ಬಗ್ಗೆ ಯೋಜನೆ ಸಿದ್ಧಪಡಿಸಿ ಮಾಲಿನ್ಯ ನಿಯಂತ್ರಣ ಮಂಡಳಿಗೆ ಅನುಮತಿಗೆ ಸಲ್ಲಿಸುವುದು.
5. ಬೆಳ್ಳಹಳ್ಳಿ, ಬೆಟ್ಟಹಲಸೂರು, ಮಿಟಗಾನಹಳ್ಳಿ, ಕಾಡಅಗ್ರಹಾರ, ಬಾಗಲೂರು, ಮೈಲಸಂದ್ರ, ಮಾರ್ಗೊಂಡನಹಳ್ಳಿ ಹಾಗೂ ಮುದ್ದಯ್ಯನಪಾಳ್ಯ ಕ್ವಾರಿಗಳಲ್ಲಿ ಘನತ್ಯಾಜ್ಯ ನಿರ್ವಹಣೆಗೆ ಈಗಾಗಲೇ EIA ತಂಡವು ಭೇಟಿ ನೀಡಿದ್ದು ಅನುಮತಿಗೆ ಅವಶ್ಯವಿರುವ ಪ್ರಕ್ರಿಯೆಯನ್ನು

ತ್ವರಿತಗತಿಯಲ್ಲಿ ನಿರ್ವಹಿಸುವುದು ಹಾಗೂ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ EC, Consent and authorization ಪಡೆಯಲು ವಲಯವಾರು ಅಧಿಕಾರಿಗಳು ಕ್ರಮ ಕೈಗೊಳ್ಳುವುದು

6. ಉಳಿದ ಕ್ವಾರಿಗಳಾದ ಸಕಲವಾರ, ಹುಲ್ಲಹಳ್ಳಿ, ಮಹಾಂತಲಿಂಗಪುರ, ಕೋಡಿಗಾನಹಳ್ಳಿ, ಸಣ್ಣಪಣಹಳ್ಳಿ, ಕೋಗಿಲು ಇತ್ಯಾದಿ ಕ್ವಾರಿಗಳಲ್ಲಿ ಘನತ್ಯಾಜ್ಯ ನಿರ್ವಹಣೆ ಅನುಮತಿಯನ್ನು 2ನೇ ಹಂತದಲ್ಲಿ ಮಂಡಳಿ ವತಿಯಿಂದ ಪಡೆಯಲು ಕ್ರಮ ಕೈಗೊಳ್ಳುವುದು.
7. ಪಾಲಿಕೆಯ ವ್ಯಾಪ್ತಿಯಲ್ಲಿ ಬಯೋ ಮಿಥನೈಜೇಶನ್ ಘಟಕಗಳಲ್ಲಿ ಕುರಿತಂತೆ ಅವಶ್ಯವಿರುವ ಅನುಮತಿಯನ್ನು ಪಡೆಯಲು ಸಭೆಯಲ್ಲಿ ಚರ್ಚಿಸಿದಂತೆ ವಲಯವಾರು ಅಧಿಕಾರಿಗಳು ಕ್ರಮ ಕೈಗೊಳ್ಳುವುದು.
8. ಬೆಟ್ಟೇನಹಳ್ಳಿಯ ಸುಮಾರು 8 ಎಕರೆ ವಿಸ್ತೀರ್ಣಾದ ಕ್ವಾರಿಯನ್ನು ಜಿಲ್ಲಾಧಿಕಾರಿಗಳು, ಬೆಂಗಳೂರು ಗ್ರಾಮಾಂತರ ರವರು ಬಿಬಿಎಂಪಿರವರಿಗೆ ಹಸ್ತಾಂತರಿಸಲು ಸಿದ್ಧವಿರುವುದಾಗಿ ಸಭೆಯಲ್ಲಿ ತಿಳಿಸಿರುತ್ತಾರೆ. ಅದರಂತೆ ದಾಸರಹಳ್ಳಿ ವಲಯದ ಜಂಟಿ ಆಯುಕ್ತರು ಸದರಿ ಕ್ವಾರಿಯನ್ನು ಬಿಬಿಎಂಪಿ ಪಡೆಯಲು ಕ್ರಮ ಜರುಗಿಸುವುದು.

ಮೇಲೆ ತಿಳಿಸಿದಂತೆ ಮಾಲಿನ್ಯ ನಿಯಂತ್ರಣ ಮಂಡಳಿಯ ಸಂಬಂಧಪಟ್ಟ ಅಧಿಕಾರಿಗಳ ಸಮನ್ವಯತೆಯೊಂದಿಗೆ ಅನುಮತಿ ಪಡೆಯಲು ಶೀಘ್ರ ಕ್ರಮ ವಹಿಸಲು ಸೂಚಿಸಿದೆ.

18.11.16

ವಿಶೇಷ ಆಯುಕ್ತರು (ಆ ಮತ್ತು ಘ.ತ್ಯಾ.ನಿ.)
ಬಿ.ಬಿ.ಎಂ.ಪಿ.

**ಪ್ರತಿಯನ್ನು**

1. ಪೂಜ್ಯ ಮಹಾಪೌರರ ಆದ್ಯ ಗಮನಕ್ಕೆ ತರಲು ಆಪ್ತ ಶಾಖೆಗೆ ಸಲ್ಲಿಸಿದೆ.
2. ಉಪ ಮಹಾಪೌರರು ಆಧ್ಯ ಗಮನಕ್ಕೆ ತರಲು ಆಪ್ತ ಶಾಖೆಗೆ ಸಲ್ಲಿಸಿದೆ.
3. ಅಧ್ಯಕ್ಷರು ಆರೋಗ್ಯ ಸ್ಥಾಯಿ ಸಮಿತಿರವರ ಗಮನಕ್ಕೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
4. ಮಾನ್ಯ ಆಯುಕ್ತರು ರವರ ಅವಗಾಹನೆಗೆ ತರಲು ಆಪ್ತ ಕಾರ್ಯಾಲಯಕ್ಕೆ ಕಳುಹಿಸಿದೆ.
5. ಜಂಟಿ ಆಯುಕ್ತರು (ಘ.ತ್ಯಾ.ನಿ.) ರವರಿಗೆ ಮುಂದಿನ ಕ್ರಮಕ್ಕಾಗಿ.
6. ಪ್ರಧಾನ ಅಭಿಯಂತರರು/ಮುಖ್ಯ ಅಭಿಯಂತರರು (ಘ.ತ್ಯಾ.ನಿ.) ರವರ ಮುಂದಿನ ಅಗತ್ಯ ಕ್ರಮಕ್ಕಾಗಿ.
7. ಎಲ್ಲಾ ವಲಯದ ಅಪರ/ಜಂಟಿ ಆಯುಕ್ತರುಗಳಿಗೆ ಮುಂದಿನ ಅಗತ್ಯ ಕ್ರಮಕ್ಕಾಗಿ
8. ಎಲ್ಲಾ ವಲಯದ ಮುಖ್ಯ ಅಭಿಯಂತರರುಗಳಿಗೆ ಮುಂದಿನ ಅಗತ್ಯ ಕ್ರಮಕ್ಕಾಗಿ
9. ಎಲ್ಲಾ ವಲಯದ ಅಧೀಕ್ಷಕ ಅಭಿಯಂತರರುಗಳಿಗೆ ಮುಂದಿನ ಅಗತ್ಯ ಕ್ರಮಕ್ಕಾಗಿ ಹಾಗೂ ಸಂಬಂಧಪಟ್ಟಸಿ ಸಂಸ್ಕರಣಾ ಘಟಕಗಳ ಕಾಪಾಅ ರವರಿಗೆ ಸೂಕ್ತ ಕ್ರಮವಹಿಸಲು ನಿರ್ದೇಶಿಸಲು ಸೂಚಿಸಿದೆ.
10. ಕಛೇರಿ ಕಡತಕ್ಕೆ.